**ಸಿವಿಲ್ ಜಡ್ಜ್ ಹಾಗೂ ಹೆ.ಪ್ರ.ದ.ನ್ಯಾ.ದಃ ನ್ಯಾಯಾಲಯಃ ತರೀಕೆರೆ**

**ಸಿ.ಸಿ ಸಂಖ್ಯೆ ::240/2019**

| | | | |
|---|---|---|---|
| **ಸಾಕ್ಷಿದಾರರ ಹೆಸರು** | : | ಅಯಾಜ್ | **PW**-1 |
| **ತಂದೆಯ ಹೆಸರು** | : | ಸಿದ್ದಿಕ್ ಅಹಮದ್ | **CW**-2 |
| **ವಯಸ್ಸು** | : | 26 ವರ್ಷ | |
| **ಉದ್ಯೋಗ** | : | ಖಾಸಗಿ ಕೆಲಸ | |
| **ವಾಸಸ್ಥಳ** | : | ಕಲ್ಲೇನಹಳ್ಳಿ | |

**ದಿನಾಂಕಃ25-04-2025 ರಂದು ಪ್ರಮಾಣವಚನ ಬೋಧಿಸಲಾಯಿತು.**

**:: ಮುಖ್ಯ ವಿಚಾರಣೆ :: ಮಾನ್ಯ A.P.P ರವರಿಂದ ::**

ಸಾಕ್ಷಿಗೆ ದಿನಾಂಕ 06.10.2018 ರ ಒಂದು ಮಹಜರ್ ಅನ್ನು ತೋರಿಸಲಾಗಿ ಅದರಲ್ಲಿ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಮಹಜರ್ ಅನ್ನು ನಿಪಿ1 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ1 ಎ ಎಂದು ಗುರುತಿಸಲಾಯಿತು. ಸದರಿ ಮಹಜರ್ ಅನ್ನು ಯಾವ ಕಾರಣಕ್ಕೆ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಪೊಲೀಸರು ಯಾವುದೋ ಒಂದು ದಾಖಲಾತಿಗೆ ಸಹಿ ಮಾಡಲು ತಿಳಿಸಿದ್ದು ಅದರಂತೆ ನಾನು ಸಹಿ ಮಾಡಿರುತ್ತೇನೆ. ನಿಪಿ1 ಮಹಜರ್ ನಲ್ಲಿ ಇರುವ ವಿಚಾರಗಳು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಪೊಲೀಸರು ಯಾವುದೇ ಮಹಜರ್ ಕ್ರಮ ಜರುಗಿಸಿರುವುದಿಲ್ಲ ಮತ್ತು ವಸ್ತುಗಳನ್ನು ಅಮಾತನ್ನುಪಡಿಸಿಕೊಂಡಿರುವುದಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ.

ಸಾಕ್ಷಿಗೆ ಒಂದು ಪೋಟೋ ವನ್ನು ತೋರಿಸಲಾಗಿ ಅದರಲ್ಲಿ ತನ್ನ ಇರುವಿಕೆಯನ್ನು ನೋಡಿ ಗುರುತಿಸಿದ ಕಾರಣ ಸದರಿ ಪೋಟೋ ವನ್ನು ನಿಪಿ2 ಎಂದು ಗುರುತಿಸಲಾಯಿತು. ಸದರಿ ಪೋಟೋ ವನ್ನು ಎಲ್ಲಿ ಯಾವಾಗ ಯಾವ ಕಾರಣಕ್ಕೆ ತೆಗೆದಿರುತ್ತಾರೆ ಎಂದು ಈಗ ನನಗೆ ನೆನಪಿಲ್ಲ.

(ಈ ಹಂತದಲ್ಲಿ ಮಾನ್ಯ ಎ.ಪಿ.ಪಿ. ಯವರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರುತ್ತಾರೆ ಅಂತೆಯೇ ಪರಿಗಣಿಸಿ ಅನುಮತಿ ನೀಡಲಾಯಿತು)

**::ಪಾಟೀಸವಾಲು :: ಮಾನ್ಯ A P P ರವರಿಂದ ::**

ದಿನಾಂಕ 06.10.2018 ರಂದು ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಪೊಲೀಸರು ನನ್ನನ್ನು ಹಾಗೂ ಚಾಸಾ 3 ರವರನ್ನು ಆರೋಪಿಯಿಂದ ವಶಪಡಿಸಿಕೊಳ್ಳಲಾದ ಮದ್ಯಕ್ಕೆ ಸಂಬಂಧಪಟ್ಟಂತೆ ಮಹಜರ್ ಜರುಗಿಸಲು ಸಾಕ್ಷಿದಾರರನ್ನಾಗಿ ಬರಲು ಕೇಳಿಕೊಂಡಿದ್ದು ಅದರ ಮೇರೆಗೆ ನಾವು ಒಪ್ಪಿ ಘಟನಾ ಸ್ಥಳಕ್ಕೆ ಹೋಗಿರುತ್ತೇವೆ ಎಂದರೆ ಸರಿಯಲ್ಲ.

ಪೊಲೀಸರು ನನ್ನ ಹಾಗೂ ಚಾಸಾ 3 ರವರ ಸಮಕ್ಷಮ 90 ಎಂ ಎಲ್ ನ 28 ರಾಜಾ ವಿಸ್ಕಿ ಪ್ಯಾಕೇಟ್‌ಗಳನ್ನು, 180 ಎಂ ಎಲ್ ನ 4 Bagpiper ವಿಸ್ಕಿ ಪ್ಯಾಕೇಟ್ ಗಳನ್ನು, 180 ಎಂ ಎಲ್ ನ 5 Old Tavarin ಪ್ಯಾಕೇಟ್‌ಗಳನ್ನು ಮತ್ತು 1 ಪ್ಲಾಸ್ಟಿಕ್ ಬಕೇಟ್ ಹಾಗೂ ರೂ.80/- ನಗದನ್ನು ಆರೋಪಿಯಿಂದ ಆ ದಿನ ಮಃ 02.00 ರಿಂದ 02.45 ಗಂಟೆ ಮಧ್ಯದಲ್ಲಿ ನಿಪಿ1 ರಂತೆ ಮಹಜರ್ ಕ್ರಮವನ್ನು ಜರುಗಿಸಿ ನನ್ನ ಹಾಗೂ ಚಾಸಾ 3 ರವರ ಸಮಕ್ಷಮ ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ನಿಪಿ2 ರಂತೆ ಪೋಟೋವನ್ನು ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ನಿಪಿ1 ರಲ್ಲಿ ಇರುವ ವಿಚಾರಗಳನ್ನು ನನಗೆ ಓದಿ ತಿಳಿಸಿದ ಮೇರೆಗೆ ನಾನು ಅದಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಈ ಬಗ್ಗೆ ನಾನು ದಿನಾಂಕ 12.10.2018 ರಂದು ಪೊಲೀಸರಿಗೆ "ನಾನು ಮೇಲ್ಕಂಡ ವಿಳಾಸದಲ್ಲಿ... ... .ಪುನಃ ನೋಡಿದರೆ ಗುರುತಿಸುತ್ತೇನೆ" ಎಂದು ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಸದರಿ ಹೇಳಿಕೆಯನ್ನು ಅಲ್ಲಗಳೆದ ಕಾರಣ ಆ ಭಾಗವನ್ನು ನಿಪಿ3 ಎಂದು ಗುರುತಿಸಲಾಯಿತು.

ಈ ಪ್ರಕರಣದ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದ್ದರೂ ಈಗ ಆರೋಪಿಯ ಜೊತೆ ಶಾಮಿಲಾಗಿ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**:: ಪಾಟೀ ಸವಾಲು :: ಆರೋಪಿ ಪರ ವಕೀಲರಿಂದ ::**

**( ಪಾಟೀ ಸವಾಲು ಇರುವುದಿಲ್ಲ)**

**:: ಮರುವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

sd/-

ಸಿ.ಜೆ. ಮತ್ತು ಹೆ. ಜೆ.ಎಮ್.ಎಫ್.ಸಿ.,

ತರೀಕೆರೆ